ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020-21 ದಿನಾಂಕ : 30-12-2020

# ಪತ್ರಿಕಾ ಪ್ರಕಟಣೆ

## ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಪಿ. ರವಿಕುಮಾರ್ ನೇಮಕ

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):**

ಕರ್ನಾಟಕ ರಾಜ್ಯ ಸರ್ಕಾರದ ಪ್ರಸ್ತುತ ಮುಖ್ಯ ಕಾರ್ಯದರ್ಶಿಯಾಗಿರುವ ಟಿ. ಎಂ. ವಿಜಯಭಾಸ್ಕರ್ ಅವರು ಡಿಸೆಂಬರ್ 31, 2020 ರಂದು ವಯೋನಿವೃತ್ತಿ ಹೊಂದಲಿರುವ ಹಿನ್ನಲೆಯಲ್ಲಿ ಅವರ ಸ್ಥಾನಕ್ಕೆ ಪಿ. ರವಿಕುಮಾರ್, ಐ.ಎ.ಎಸ್. ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

## ಮಕ್ಕಳಿಗಾಗಿ ಉಚಿತ "ಟೆಲಿ-ಕೌನ್ಸಲಿಂಗ್"

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):**

ಮಕ್ಕಳ ರಕ್ಷಣಾ ನಿರ್ದೇಶನಾಲಯ ಕರ್ನಾಟಕದಲ್ಲಿ ಆಪ್ತ-ಸಮಾಲೋಚನೆ ಅಗತ್ಯವಿರುವ ಎಲ್ಲಾ ಮಕ್ಕಳಿಗಾಗಿ ಉಚಿತ "ಟೆಲಿ-ಕೌನ್ಸಲಿಂಗ್" ಸೌಲಭ್ಯವನ್ನು ನೀಡಲು ಟೋಲ್ ಫ್ರೀ ಸಂಖ್ಯೆ : 14499 ಸ್ಥಾಪಿಸಲಾಗಿದೆ.

ಆಪ್ತ ಸಮಾಲೋಚನೆ ಬಯಸುವ ಕರ್ನಾಟಕದಲ್ಲಿನ ಎಲ್ಲಾ ಮಕ್ಕಳು ಹಾಗೂ ಮಕ್ಕಳಿಗಾಗಿ ಅವರ ಪೋಷಕರು ಸಹ 14499 ಸಂಖ್ಯೆಗೆ ಕರೆ ಮಾಡುವ ಮೂಲಕ ಮಕ್ಕಳಿಗೆ ಉಚಿತವಾಗಿ ಆಪ್ತ ಸಮಾಲೋಚನೆ ಸೌಲಭ್ಯ ಪಡೆಯಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಾಹಸ ತರಬೇತಿ

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):**

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಗೆ ಜನವರಿ 2021 ರಿಂದ ಮಾರ್ಚ್ 2021 ರವರೆಗೆ 3 ತಿಂಗಳುಗಳ ಕಾಲ ಅಕಾಡೆಮಿಯ ಸಾಹಸ ಕ್ರೀಡಾ ಕೇಂದ್ರಗಳಲ್ಲಿ ಸಾಹಸ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

1. **Rock Climbing Course 2) White Water Kayaking Level-1 3) Wind Surfing Course 4) Sports Climbing Level-I 5) Sports Climbing Level-2 6) Basic River Guide Course 7) Scuba Diving Course 8) White Water Kayaking Level-2 9) Belayers Course 10) Advance River Guide Course 11) Activity Supervisor Course 12) Rock Climbing Workshop 13) Wilderness First Aid Course 14) White Water Rescue Technician Course** ಈ ತರಬೇತಿ ಶಿಬಿರಗಳಿಗೆ ಸಂಬಂಧಿಸಿದ ಅರ್ಹತೆ ಮತ್ತು ಉಳಿದ ಹೆಚ್ಚಿನ ಮಾಹಿತಿಯನ್ನು ಅಕಾಡೆಮಿಯ ವೆಬ್‌ಸೈಟ್ **www.gethnaa.com** ನಲ್ಲಿ ನೀಡಲಾಗಿದೆ. ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಸಂಬಂಧಿಸಿದ ಅರ್ಹತೆಯುಳ್ಳ ಪ್ರಮಾಣ ಪತ್ರದೊಂದಿಗೆ ಆನ್‌ಲೈನ್ ಮುಖಾಂತರ ಅಥವಾ ಅಕಾಡೆಮಿಯ ಕಚೇರಿಗೆ 6-1-2021 ರೊಳಗೆ ಸಲ್ಲಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## <u>ಪ್ರಾಧಿಕಾರದ ಪ್ರಕಟಣೆಗಳಿಗೆ ಶೇ.50% ರಿಯಾಯಿತಿ</u>

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):**

ಗಣರಾಜ್ಯೋತ್ಸವದ ಅಂಗವಾಗಿ 2021ರ ಜನವರಿ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇಖಡಾ 50%ರ ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಿದ್ದು, ಪುಸ್ತಕ ಪ್ರಿಯರು ಈ ಅವಕಾಶ ಬಳಸಿಕೊಳ್ಳಲು ಕೋರಿದೆ. ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹಾಗೂ ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ

ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್ ನಲ್ಲಿ ಕೂಡ ಈ ಶೇ.50% ರಿಯಾಯಿತಿ ಲಭ್ಯವಿದೆ.

ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕಗಳನ್ನು ಅಂತರ್ಜಾಲದಲ್ಲಿಯೂ ಕೂಡ ಶೇಕಡಾ 50%ರ ರಿಯಾಯಿತಿಯಲ್ಲಿ ಲಭ್ಯವಿದೆ. ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.com ದಲ್ಲಿ ನಮ್ಮ ಪುಸ್ತಕಗಳು ವಿಭಾಗದಲ್ಲಿ ಆಯ್ಕೆ ಮಾಡಿ, ಆನ್ ಲೈನ್ ಮೂಲಕ ಹಣ ಪಾವತಿಸಿ ಪುಸ್ತಕಗಳನ್ನು ಅಂಚೆ ಮೂಲಕ ಪಡೆಯಬಹುದಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಈವರೆಗೆ ಪ್ರಕಟಿಸುತ್ತಾ ಬಂದಿದೆ. ಇವುಗಳಲ್ಲಿ ವ್ಯಕ್ತಿ ಚಿತ್ರಗಳು, ನಾಟಕಗಳು, ಅಲೆಮಾರಿ ಸಮುದಾಯ, ವೈದ್ಯಕೀಯ, ಪ್ರಾಚೀನ ಕನ್ನಡ ಸಾಹಿತ್ಯ, ಜಾನಪದ, ಪರಿಸರ, ಕೃಷಿ ಹೀಗೆ ಹಲವು ಹತ್ತು ಪ್ರಕಾರಗಳಲ್ಲಿ ಸಾಹಿತ್ಯ ಕೃತಿಗಳನ್ನು ಸುಮಾರು 446 ಶೀರ್ಷಿಕೆಗಳನ್ನು ಮುದ್ರಿಸಿ ಪ್ರಕಟಿಸಿದೆ. ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕಾರದ್ದು.

## ದೇವಿಕಾರಾಣಿ–ರೋರಿಕ್ ಎಸ್ಟೇಟನ್ನು ಪಾರಂಪರಿಕ ಜೈವಿಕತಾಣ ಎಂದು ಘೋಷಣೆ ಮಾಡಲು ಶಿಫಾರಸ್ಸು

ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):

ಬೆಂಗಳೂರಿನ ಬಳಿ ಇರುವದೇ ದೇವಿಕಾರಾಣಿ–ರೋರಿಕ್‌ಎಸ್ಟೇಟನ್ನು ಪಾರಂಪರಿಕ ಜೈವಿಕ ತಾಣ ಎಂದು ಘೋಷಣೆ ಮಾಡುವ ಬಗ್ಗೆ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಶಿಫಾರಸು ಮಾಡಿದ್ದಾರೆ. ತಜ್ಞರ ತಂಡ ಸ್ಥಳಕ್ಕೆ ಭೇಟಿ ನೀಡಿ ಸರ್ಕಾರಕ್ಕೆ ವರದಿ ನೀಡಿದೆ.

ಇಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ಅವರನ್ನು ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶಿಸರ ಅವರು ಭೇಟಿ ಮಾಡಿದರು. ದೇವಿಕಾರಾಣಿ ರೋರಿಕ್ ಎಸ್ಟೇಟ್ ಕುರಿತು ವಿಶೇಷ ಶಿಫಾರಸುಗಳನ್ನು ಮುಖ್ಯ ಕಾರ್ಯದರ್ಶಿಗಳಿಗೆ ನೀಡಿದರು.

ತಾತಗುಣಿ (ದೇವಿಕಾರಾಣಿಎಸ್ಟೇಟ್) ಎಸ್ಟೇಟ್‌ನ್ನು ಪಾರಂಪರಿಕ ಜೀವವೈವಿಧ್ಯತಾಣ ಎಂದು ಗುರುತಿಸಲು ಜೀವವೈವಿಧ್ಯ ಮಂಡಳಿ ಮುಂದಾಗಿದೆ. ಈ ಬಗ್ಗೆ ಸರ್ಕಾರದ ಹಾಗೂ ದೇವಿಕಾರಾಣಿ ರೋರಿಕ್‌ಬೋರ್ಡ್‌ಆಸಕ್ತಿ ವಹಿಸಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ದಿ ರೋರಿಕ್&ದೇವಿಕಾರಾಣಿ ರೋರಿಕ್ ಎಸ್ಟೇಟ್ ಬೋರ್ಡ್‌ನ ಅಧ್ಯಕ್ಷರೂ ಆಗಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಶಿಫಾರಸು, ಮನವಿ ಸ್ವೀಕರಿಸಿದರು."ಬೋರ್ಡ್ ಸಭೆಯಲ್ಲಿ ಶಿಫಾರಸು ಮಂಡಿಸುತ್ತೇನೆ. ಶಿಫಾರಸುಗಳು ದೇವಿಕಾರಾಣಿ ಎಸ್ಟೇಟ್ ಬೋರ್ಡ್‌ನಉದ್ದೇಶಕ್ಕೆ ಪೂರಕವಾಗಿದೆಎಂದು ತಿಳಿಸಿದರು.ಜೀವವೈವಿಧ್ಯ ಮಂಡಳಿ ಕ್ರಿಯಾಶೀಲ ಚಟುವಟಿಕೆ ನಡೆಸುತ್ತಿದೆ"ಎಂದುಶ್ರೀ ವಿಜಯ ಭಾಸ್ಕರ್‌ಹರ್ಷ ವ್ಯಕ್ತ ಮಾಡಿದರು.

<u>ತಜ್ಞರ ವರದಿ-ಶಿಫಾರಸಿನ ಮುಖ್ಯಾಂಶಗಳು.</u>

<u>ಸ್ಥಳಭೇಟಿಃ</u> ಇತ್ತೀಚೆಗೆ **24-12-2020**ರಂದು, ಜೀವವೈವಿಧ್ಯ ಮಂಡಳಿ ಅಧ್ಯಕ್ಷರು, ತಜ್ಞರು ಹಾಗೂ ಅರಣ್ಯಾಧಿಕಾರಿಗಳನ್ನು ಒಳಗೊಂಡ ತಂಡ ಬೆಂಗಳೂರಿನ ದೇವಿಕಾರಾಣಿ ರೋರಿಕ್ ಎಸ್ಟೇಟ್‌ಗೆ ಭೇಟಿ ನೀಡಿ ಅಲ್ಲಿನ ಪರಿಸರ, ಅರಣ್ಯ ಜೀವವೈವಿಧ್ಯ ಪರಿಸ್ಥಿತಿಯ ಸಮೀಕ್ಷೆ ನಡೆಸಿದೆ. ದೇವಿಕಾರಾಣಿ ಎಸ್ಟೇಟ್ ನಿರ್ವಹಣಾ ಮಂಡಳಿಯ ಅಧಿಕಾರಿಗಳು ಸಿಬ್ಬಂದಿ ಜೊತೆಗೆ ಇದ್ದರು.

<u>ಶಿಫಾರಸು:</u>

1) ದೇವಿಕಾರಾಣಿ-ರೋರಿಕ್‌ಎಸ್ಟೇಟ್ ನಾಡಿನ ಅದರಲ್ಲಿಯೂ ಬೆಂಗಳೂರಿನ ಅದ್ಭುತಜೈವಿಕ ಭಂಡಾರವಾಗಿದೆ. ಪ್ರಸಿದ್ಧಚಿತ್ರ ಕಲಾವಿದ ಹಾಗೂ ಚಲನಚಿತ್ರ ಕಲಾವಿದೆಯ ನಿಸರ್ಗ ಪ್ರೀತಿ-ಕಾಳಜಿ ನೆನಪಿಸುವ ಪಾರಂಪರಿಕ ಸಸ್ಯಲೋಕಇದಾಗಿದೆ. ಇದನ್ನು ಕನ್ನಡದಲ್ಲಿ ದೇವಿಕಾರಾಣಿ-ರೋರಿಕ್‌ಎಸ್ಟೇಟ್ ಪಾರಂಪರಿಕ ಜೈವಿಕ ಆಶ್ರಮ ಎಂದೇ ಕರೆಯಬೇಕು. ಮತ್ತು ಆ ರೀತಿ ನಾಮಫಲಕ ಹಾಕಬೇಕು. ಜೀವವೈವಿಧ್ಯ ಕಾಯಿದೆ **2002**ರ ಅಡಿಯಲ್ಲಿ ಪಾರಂಪರಿಕ ಜೀವವೈವಿಧ್ಯತಾಣ ಎಂದು ಈ ಪ್ರದೇಶವನ್ನು ಸರ್ಕಾರ ಘೋಷಣೆ ಮಾಡಬೇಕು. ಈ ಮೂಲಕ ತಾತಗುಣಿ ಎಸ್ಟೇಟ್ ಸ್ಥಾಪಕರ ಉದ್ದೇಶ, ಕನಸನ್ನು ನನಸು ಮಾಡಬೇಕು. **2016**ರಲ್ಲಿ ಸರ್ಕಾರದ ಮಟ್ಟದಲ್ಲಿ ಪಾರಂಪರಿಕ ಜೀವವೈವಿಧ್ಯ ತಾಣ ಎಂದು ಘೋಷಣೆ ಮಾಡಲು ಪ್ರಯತ್ನ ನಡೆದಿತ್ತು. ಎಂಬುದನ್ನ ಇಲ್ಲಿ ನೆನಪಿಸುತ್ತೇವೆ. ಇಲ್ಲಿನ ಸಸ್ಯವೈವಿಧ್ಯ, ಕೆರೆ, ಜಲಚರ, ವನ್ಯಜೀವಿ, ಪಕ್ಷಿಸಂಕುಲ ಪಶ್ಚಿಮ ಘಟ್ಟದ ಪರಿಸರಕ್ಕೆ ಸಮನಾಗಿದೆ. ಇದು ಆನೆ ಕಾರಿಡಾರ್ ಆಗಿದೆ. ಜೀವವೈವಿಧ್ಯ ಮಂಡಳಿ ತಜ್ಞರ ತಂಡ ಭೇಟಿ ಮಾಡಿದ ಸಂದರ್ಭದಲ್ಲಿ ಎಸ್ಟೇಟ್ ಪ್ರದೇಶಕ್ಕೆ ಆನೆ ಭೇಟಿ ನೀಡಿತ್ತು ಎಂಬ ಅಂಶವನ್ನು ಎತ್ತಿಹಿಡಿದಿದೆ
2) **467** ಎಕರೆ ಎಸ್ಟೇಟ್ ಪ್ರದೇಶವಿದ್ದು ಇಲ್ಲಿ **128** ಜಾತಿಯ ಸಸ್ಯ ಪ್ರಭೇದಗಳನ್ನು ಜೀವವೈವಿಧ್ಯ ಮಂಡಳಿ **2004** ರಲ್ಲೇ ಗುರುತಿಸಿದೆ. ಅರಣ್ಯ ಇಲಾಖೆ ಎಸ್ಟೇಟ್ ವ್ಯಾಪ್ತಿಯಲ್ಲಿ ಟ್ರೀ ಪಾರ್ಕ್ ನಿರ್ಮಿಸಿದೆ. ತಾತಗುಣಿ ಎಸ್ಟೇಟ್ ಬೆಂಗಳೂರಿನ ನೈಸರ್ಗಿಕ ಆಮ್ಲಜನಕ ಕೇಂದ್ರವಾಗಿದೆ.

   ಈ ಹಿನ್ನೆಲೆಯಲ್ಲಿ ಎಸ್ಟೇಟ್‌ಗೆ ನಿಯಂತ್ರಿತ ಪ್ರವೇಶಕ್ಕೆ ಅವಕಾಶ ನೀಡಬೇಕು. ಅಧ್ಯಯನಕ್ಕೆ ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು.ಪರಿಸರ ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸಬೇಕು.ದೇವಿಕಾರಾಣಿ ಎಸ್ಟೇಟ್‌ನಲ್ಲಿ ವಾಣಿಜ್ಯ ಪ್ರವಾಸ್ಯೋದ್ಯಮಕ್ಕೆ ಮುಕ್ತ ಅವಕಾಶ ಕಲ್ಪಿಸುವದು <u>ಸಾಧು ಅಲ್ಲ</u> ಎಂದು ತಜ್ಞರ ತಂಡ ಅಭಿಪ್ರಾಯ ನೀಡಿದೆ.
3) ಅತಿಕ್ರಮಣ ಆಗದಂತೆ ತಡೆಯಲು ಎಸ್ಟೇಟ್ ಸುತ್ತ ಕಾಂಕ್ರಿಟ್‌ಗೋಡೆ ನಿರ್ಮಿಸುವಕಾರ್ಯ ನಡೆಯುತ್ತಿದೆ. ಸಂಪೂರ್ಣಎಸ್ಟೇಟ್ ಸುತ್ತಗೋಡೆ ನಿರ್ಮಾಣ ಆಗಬೇಕು. ಇಲ್ಲವಾದಲ್ಲಿ ಅತಿಕ್ರಮಣಕ್ಕೆ ದಾರಿ ಆಗಲಿದೆ ಎಂದು ವರದಿ ಹೇಳಿದೆ.

4) ಇದು ಬಹುತೇಕ ಅರಣ್ಯ ಪ್ರದೇಶವಾಗಿದೆ. ಆದ್ದರಿಂದಅರಣ್ಯ ಇಲಾಖೆಗೆ ಎಸ್ಟೇಟ್‌ಅರಣ್ಯ ಸಂಪತ್ತಿನ ರಕ್ಷಣೆ, ನಿರ್ವಹಣೆ ಜವಾಬ್ದಾರಿ ನೀಡಬೇಕು. ಸುಪ್ರೀಂಕೋರ್ಟ್ ಆದೇಶದಲ್ಲೂ ಈ ಬಗ್ಗೆ ಉಲ್ಲೇಖವಿದೆ.

5) ಎಸ್ಟೇಟ್‌ನಕೆರೆ ಪ್ರದೇಶದಲ್ಲಿ ಅಪರೂಪದ ಜಲಜೀವಿಗಳಿವೆ. ಪಕ್ಷಿಗಳ ಆವಾಸ ಸ್ಥಾನ, ಸಮೃದ್ಧ ನೀರು ಇಲ್ಲಿದೆ. ಇಲ್ಲಿಂದ ಚಿಕ್ಕ ಹಳ್ಳ ಹರಿದು ಸುತ್ತಲಿನ ಜಲಪ್ರದೇಶಕ್ಕೆ ಜಲ ಸಮೃದ್ಧಿ ಉಂಟು ಮಾಡುತ್ತಿದೆ. ಇದು ಜಲಮೂಲ ಆದರೆ ಇದೀಗ ತಾತಗುಣಿ ಎಸ್ಟೇಟ್‌ಕೆರೆ ನೀರು ಹಸಿರು ಬಣ್ಣಕ್ಕೆ ತಿರುಗಿ ಕಲುಷಿತವಾಗಿದೆ. ಈ ಕೆರೆಗೆಎಸ್ಟೇಟ್ ಹೊರಗಿನ ಪ್ರದೇಶದಿಂದ ವಾಣಿಜ್ಯ ಸಂಕೀರ್ಣ, ಕೈಗಾರಿಕಾ, ತ್ಯಾಜ್ಯ ನೀರು ಸೇರ್ಪಡೆಆಗುತ್ತಿವೆ. ಎಸ್ಟೇಟ್‌ಕೆರೆ ಮಾಲಿನ್ಯತಡೆಗೆ ಕ್ರಮಬೇಕು. ಮಾಲಿನ್ಯ ನಿಯಂತ್ರಣ ಮಂಡಳಿ ತುರ್ತು ಕ್ರಮಕ್ಕೆ ಮುಂದಾಗಬೇಕು. ಇಲ್ಲಿ ಕೃತ್ರಿಮಗಾರ್ಡನ್ ನಿರ್ಮಾಣದ ಬಗ್ಗೆ ಪುನರ್ ಪರಿಶೀಲನೆ ಆಗಲಿ, ಇಲ್ಲಿ ಪೆಸ್ಟಿಸೈಡ್ ಸಿಂಪಡಣೆ ಮಾಡದಂತೆ ಕ್ರಮಅಗತ್ಯ.

6) ತಾತಗುಣಿ ಎಸ್ಟೇಟ್‌ನಲ್ಲಿ 1912 ರಲ್ಲೇ ವಿದೇಶದಿಂದ ತಂದು ಬೆಳೆಸಿದ ಬ್ಲುರ್‌ಸೆರಾ (**Bursera)** ಎಂಬ ಜಾತಿಯ ಗಿಡದ ಉತ್ಪನ್ನಗಳನ್ನು ಅಂಟು–ರಾಳ ತಯಾರಿಸಲು ಉಪಯೋಗಿಸುತ್ತಾರೆ. ಬ್ಲುರ್‌ಸೇರಾಗಿಡದ ಬೀಜ, ಉಪ ಉತ್ಪನ್ನದಿಂದ ಎಣ್ಣೆ ತೆಗೆಯುವ ಯಂತ್ರಗಳನ್ನು ರೋರಿಕಾರಾಣಿ–ರೋರಿಚ್‌ದಂಪತಿ ಎಸ್ಟೇಟ್‌ನಲ್ಲಿ ತಂದಿದ್ದರು. ಖಾಲಿ ಇರುವಜಾಗದಲ್ಲಿ ಈ ಗಿಡ ಬೆಳೆಸಬಹುದಾಗಿದೆ. ರಾಜ್ಯದ ಬೇರೆ ಸ್ಥಳಗಳಿಗೂ ಇದರ ಬೀಜ ನೀಡಬಹುದಾಗಿದೆ. ಎಸ್ಟೇಟ್ ಸ್ಥಾಪಕರ ನೆನಪು ಹಸಿರಾಗಿಸಲು ಇಂಥ ಕ್ರಮ ಅವಶ್ಯಎಂದು ಸಲಹೆ ನೀಡುತ್ತೇವೆ.

7) ತಾತಗುಣಿ ಎಸ್ಟೇಟ್ ಮಧ್ಯೆ ಬೆಂಗಳೂರು ಕನಕಪುರ ರಾಜ್ಯ ಹೆದ್ದಾರಿ ಇದೆ. ಎಸ್ಟೇಟ್ ಪ್ರವೇಶಿಸುವ ಹೆದ್ದಾರಿಯ ಪ್ರದೇಶದಲ್ಲಿ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ತುಂಬಿದೆ. ಸುಂದರ ಎಸ್ಟೇಟ್ ಪರಿಸರ ಪ್ರದೇಶದ ಹೆಬ್ಬಾಗಿಲು ಕಸದ ರಾಶಿಯಿಂದ ತುಂಬಿದೆ. ಸ್ಥಳೀಯ ಪಂಚಾಯತ್, ಹೆದ್ದಾರಿ ಪ್ರಾಧಿಕಾರ ಸ್ವಚ್ಛತಾ ಅಭಿಯಾನ ನಡೆಸಬೇಕು. ಮಾಲಿನ್ಯತಡೆಗೆ ಕಟ್ಟು ನಿಟ್ಟಿನ ಕ್ರಮಬೇಕು.

8) ದೇವಿಕಾರಾಣಿ–ರೋರಿಕ್‌ಎಸ್ಟೇಟ್‌ನಟ್ರಸ್ಟ್‌ನಲ್ಲಿ ಪರಿಸರತಜ್ಞ ಹಾಗೂ ಜೀವವೈವಿಧ್ಯ ಮಂಡಳಿಯ ಪ್ರತಿನಿಧಿ ಆಹ್ವಾನಿತ ಸದಸ್ಯರಾಗಿ ಇರಬೇಕು.

9) ದೇವಿಕಾರಾಣಿ ರೋರಿಕ್‌ಎಸ್ಟೇಟ್ ಪಾರಂಪರಿಕ ಜೈವಿಕತಾಣ ಸಂರಕ್ಷಣೆ ಸಂವರ್ಧನೆಗೆ ಈ ಮೇಲೆ ಸೂಚಿಸಿರುವ ಶಿಫಾರಸುಗಳೂ ಸೇರಿದಂತೆ ಸಮಾಲೋಚನೆ ನಡೆಸಬೇಕು. ದಿ ರೋರಿಕ್&ದೇವಿಕಾರಾಣಿ ರೋರಿಕ್ ಎಸ್ಟೇಟ್ ಬೋರ್ಡ್‌ಟ್ರಸ್ಟ್ ಸಭೆ ಏರ್ಪಡಿಸಿ ಈ ಬಗ್ಗೆ ನೇರ ಕ್ರಮಗಳಿಗೆ ಮುಂದಾಗಬೇಕು.

ಇನ್ನಷ್ಟು ಮಾಹಿತಿಜೊತೆಗೆ ಇದೆ.ತಾತಗುಣಿಎಸ್ಟೇಟ್‌ನಕ್ಷೇತ್ರಭೇಟಿ ಫೋಟೋ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಭೇಟಿಮಾಡಿಶಿಫಾರಸು ನೀಡಿದ ಫೋಟೊ ಲಗತ್ತಿಸಿದೆ.

## ಕೆಲವು ಮಾಹಿತಿ

ಕನಕಪುರರಸ್ತೆ, ಬಿ.ಎಂ. ಕಾವಲ್ ಹಳ್ಳಿಯ ಎಡ ಮತ್ತು ಬಲಭಾಗದಲ್ಲಿ 15 ಸರ್ವೆ ನಂಬರ್ ಪ್ರದೇಶದಲ್ಲಿ ವಿಸ್ತರಣೆಯಾಗಿರುವ 467.53 ಎಕರೆ ಪ್ರದೇಶ ಹೊಂದಿರುವ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್‌ಎಸ್ಟೇಟ್ ಪ್ರಸಿದ್ಧ ರಷ್ಯನ್ ಚಿತ್ರಕಲಾವಿದರಾದ ಡಾ. ಸ್ವೆಟೋಸ್ಲಾವ್ ರೋರಿಕ್ ಮತ್ತು ಅವರ ಪತ್ನಿ – ಭಾರತದ ಮೊಟ್ಟಮೊದಲ ಚಲನಚಿತ್ರಕಲಾವಿಧೆಯಾದ – ಶ್ರೀಮತಿ ದೇವಿಕಾರಾಣಿ ಇವರ ಒಡೆತನಕ್ಕೆ ಸೇರಿದ ತಾಣವಾಗಿರುತ್ತದೆ. ಈ ಎಸ್ಟೇಟ್‌ನಲ್ಲಿಡಾ॥ ಸ್ವೆಟೋಸ್ಲಾವ್ ರೋರಿಕ್ ಮತ್ತು ಅವರ ತಂದೆ ಡಾ॥ ನಿಕೊಲಾಸ್‌ರೋರಿಕ್ ಇವರುಗಳು ಬಿಡಿಸಲಾದ ಬೆಲೆಬಾಳುವ ಅಂತರರಾಷ್ಟ್ರಿಯ ಖ್ಯಾತಿಯ ಚಿತ್ರಕಲೆ,

ಕಲಾಕೃತಿಗಳು ಹಾಗು ಕೆತ್ತನೆಗಳು ಇರಿಸಿರುವಂತಹ ತಾಣವಾಗಿದೆ. ಇಷ್ಟಲ್ಲದೆ, ತಾಣವು ವಿವಿಧ ಸುವಾಸನೆ ಭರಿತ ಸಸ್ಯವರ್ಗಗಳನ್ನೊಳಗೊಂಡ ಮರಗಳು, ಪೊದೆಗಳು, ಗಿಡಮೂಲಿಕೆಗಳು, ಬಳ್ಳಿಗಳ ಪ್ರಭೇದಗಳಿಂದ ಕೂಡಿರುತ್ತದೆ. ಮುಖ್ಯವಾಗಿ, ಸುಮಾರು 400 ಬರ್ಸೇರಾ (ಇಂಡಿಯನ್ ಲ್ಯಾವೆಂಡರ್) ಮರಗಳನ್ನು ಇಲ್ಲಿನ ವಾರಸುದಾರರು ನೆಟ್ಟಿರುತ್ತಾರೆ ಹಾಗು ಈ ಮರಗಳಿಂದ ಲಿನಲೋ ಎಂಬ ಬೆಲೆಬಾಳುವ ಸುಗಂದದ್ರವ್ಯವನ್ನು ಸಂಗ್ರಹಿಸಬಹುದಾದ ಯಂತ್ರೋಪಕರಣವನ್ನು ಸಹ ನಿರ್ಮಾಣ ಮಾಡಿರುತ್ತಾರೆ.

ಈ ಪ್ರದೇಶವು ಹಲವಾರು ಪ್ರಾಣಿಗಳಾದ ಜಿಂಕೆ, ಮೊಲ, ತೋಳ, ನವಿಲುಗಳನ್ನು ಒಳಗೊಂಡು, ಅಪರೂಪದ ಸಸ್ತನಿಗಳಾದ ನೆಲಗರಡಿ ಮತ್ತು ನೀರುನಾಯಿ ಸಹ ಈ ವ್ಯಾಪ್ತಿಯಲ್ಲಿ ಇತ್ತೀಚೆಗೆಕಂಡಿರುವುದು ಖಾತರಿಯಾಗಿದೆ. ಈ ತಾಣವು ತನ್ನದೆ ಆದ ಸುಮಾರು 11 ಎಕರೆ ವಿಸ್ತೀರ್ಣದ ಕೆರೆಯನ್ನು ಹೊಂದೆದ್ದು, ವಿವಿಧ ಪಕ್ಷಿಗಳಾದ ಲಿಟಲ್ ಇಗ್ರೆಟ್ಸ್, ಪಾಂಡ್ ಹೆರಾನ್, ಪೆಲಿಕೆನ್, ಕೊರ್ಮೊರೆಂಟ್ಸ್ ಮತ್ತು ಕಿಂಗ್ ಫಿಶರ್ಸ್ಇಲ್ಲಿ ನೆಲೆಸಿರುತ್ತವೆ. ಇಷ್ಟಕ್ಕೆ ಸೀಮಿತವಲ್ಲದೆ,ಹಲವಾರು ಭಗೆಯ ಉರಗಗಳು, ಚಿಟ್ಟೆಗಳು, ಕ್ರಿಮಿಕೀಟಗಳು, ವಿನಾಶದ ಅಂಚಿನಲ್ಲಿರುವ ಸ್ಥಾನಿಕ ತಳಿಗಳು ಹಾಗು ಸೂಕ್ಷ್ಮಾಣು ಜೀವಿಗಳನ್ನೊಳಗೊಂಡ ಜೀವವೈವಿಧ್ಯತೆಯ ಹಸಿರು ಅರಣ್ಯ ಆಶ್ರಯ ತಾಣವಾಗಿದೆ.ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ಟ್ ಪ್ರದೇಶಕ್ಕೆ ಹೊಂದಿಕೊಂಡಿರುವ ಉತ್ತರಹಳ್ಳಿ ಮನ್ವಂತೆಕಾವಲ್ ಸಂರಕ್ಷಿತಅರಣ್ಯ ಪ್ರದೇಶವು, ಸಮೀಪದ ಬನ್ನೇರುಘಟ್ಟ ಅಭಯಾರಣ್ಯ ಮತ್ತು ಸಾವನದುರ್ಗ ಅಭಯಾರಣ್ಯ ಪ್ರದೇಶದ ಮದ್ಯದಲ್ಲಿರುವುದರಿಂದ ಉತ್ತರಹಳ್ಳಿ ಮನ್ವಂತೆಕಾವಲ್ ಆನೆಗಳು ಹಾದುಹೋಗುವ ಹೆಬ್ಬಾಗಿಲಾಗಿರುತ್ತದೆ (Elephant corridor) ಮತ್ತು ಇಲ್ಲಿ ಚಿರತೆಗಳು ಸಹ ಕಾಣಸಿಗುತ್ತವೆ. ತಾಣವು ಪ್ರತ್ಯೇಕ ಕೆರೆಯನ್ನು ಹೊಂದಿರುವುದರಿಂದ, ಈ ವಲಯಲದಲ್ಲಿನ ಹವಾಮಾನ ನಿಯಂತ್ರಿಸುವ ಬಫ್ಫರ್‌ಝೋನ್ ಆಗಿರುತ್ತದೆ. ಒಟ್ಟಾರೆ, ಈ ಪ್ರದೇಶವು ಬೆಂಗಳೂರು ನಗರದ ಸಮೀಪದಲ್ಲಿರುವ ಜೀವವೈವಿಧ್ಯ ವೈಭವವನ್ನು ಪ್ರದರ್ಶಿಸುತ್ತಿರುವ ಪ್ರಮುಖತಾಣವಾಗಿಕಂಡುಬಂದಿರುತ್ತದೆ.

ಸ್ಥಳೀಯ ಜನರು/ಮುಖಂಡರ ಕೋರಿಕೆಯ ಮೇರೆಗೆ ಬೆಂಗಳೂರು ದಕ್ಷಿಣತಾಲ್ಲೂಕು, ಅಗರಗ್ರಾಮ ಪಂಚಾಯಿತಿರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್‌ಅನ್ನು(ತಾತಗುಣಿಎಸ್ಟೇಟ್) ಜೀವವೈವಿಧ್ಯ ಪರಂಪರಿಕ ತಾಣವನ್ನಾಗಿ ಘೋಷಿಸಲು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಮನವಿಯನ್ನು ಸಲ್ಲಿಸಿರುತ್ತದೆ.ಇದಕ್ಕೆ ಮುಂದುವರೆದಂತೆ, ಕರ್ನಾಟಕ ಜೀವವೈವಿಧ್ಯ ಮಂಡಳಿಯು 2009ರಲ್ಲಿ 2016 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಕಾಲಕ್ರಮೇಣ, ಎಸ್ಟೇಟ್‌ನ ನಿರ್ವಹಣೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಲಯವು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಪ್ರದೇಶವನ್ನು “The land acquired must be utilized for the purpose for which it has been acquired” ಎಂದು ತೀರ್ಪು ನೀಡಿರುತ್ತದೆ. ಸದರಿ ಪ್ರದೇಶದ ಜೀವವೈವಿಧ್ಯ ಪರಂಪರೆಯ ಯತಾಸ್ಥಿತಿಯನ್ನು ಕಾಪಾಡಲು ಹಾಗೂ ಸಂಭವಿಹಿಸಬಹುದಾದ ಯಾವುದೇ ರೀತಿಯ ಒತ್ತುವರಿಯನ್ನು ತಡೆಗಟ್ಟಲು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಪ್ರದೇಶವನ್ನು ಜೀವವೈವಿಧ್ಯ ಅಧಿನಿಯಮ, 2002ರ ಸೆಕ್ಷನ್ 37(1) ರ ಅನುಸಾರ ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಣೆ ಮಾಡಲು ಕೋರಲಾಗಿದೆ.

## ಅಧಿಕಾರ ಸ್ವೀಕಾರ

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ):**

ದುರ್ಯೋಧನ ಎಮ್ ಐಹೊಳೆ, ಶಾಸಕರು ರಾಯಭಾಗ ವಿಧಾನ ಸಭಾ ಕ್ಷೇತ್ರ, ಬೆಳಗಾವಿ ಇವರು ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡಿದ್ದಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## Date :30.12.2020

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 116 | Moderate | $PM_{.10}$ |
| 2 | Jayanagar 5th Block, Shalini ground | 152 | Moderate | $PM_{2.5}$ |
| 3 | KAVIKA, Mysore Road | 102 | Moderate | $PM_{.10}$ |
| 4 | Rajeev Gandhi Institute of Chest Disease, NIMHANS, Hombegowda Nagar | 97 | Satisfactory | $PM_{10}$ |
| 5 | HSR Layout, near Central Silkboard | 110 | Moderate | $PM_{2.5}$ |
| 6 | City Railway Station, Magestic, Bengaluru | 107 | Moderate | $PM_{10}$ |
| 7 | Saneguruvanahalli, NisargaBhavan, KSPCB, Shivanagara | 88 | Satisfactory | $PM_{10}$ |
| 8 | BWSSB, Kadabesanahalli | 101 | Moderate | $PM_{2.5}$ |
| 9 | Peenya | 93 | Satisfactory | * |

| | | | | |
|---|---|---|---|---|
| 10 | BTM Layout | * | * | * |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
## ಪರಿಸರ ಭವನ, ಬೆಂಗಳೂರು.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 30.12.2020**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 116 | ಸಾಧಾರಣ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 152 | ಸಾಧಾರಣ | $PM_{2.5}$ |
| 3 | ಕವಿಕ, ಮೈಸೂರುರಸ್ತೆ | 102 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 97 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದರೇಷ ಮಂಡಳಿ ಹತಿರ | 110 | ಸಾಧಾರಣ | $PM_{2.5}$ |

| | | | | |
|---|---|---|---|---|
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 107 | ಸಾಧಾರಣ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 88 | ತೃಪ್ತಿಕರ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 101 | ಸಾಧಾರಣ | $PM_{2.5}$ |
| 9 | ಪೀಣ್ಯ | 93 | ತೃಪ್ತಿಕರ | * |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |